ಹನಿಗಳು ಬಿದ್ದಲೆಲ್ಲ ಬಿಲ್ಲೆ ಗಾತ್ರದ ಅಲೆಗಳು ಮೂಡುತ್ತಿದ್ದವು. ಹೀಗೆ ಕೈ ತೋಯಿಸಲೆಂದೆ ಪಕ್ಕದಲ್ಲಿ ನಿಂತವರು ಕೊಡೆ ಬಿಚ್ಚಿಕೊಂಡಿದ್ದಾರಾ? ಎಂದುಕೊಳ್ಳುತ್ತಾ ಅಚಲಾ ಮುಖ ಸಿಂಡರಿಸಿ ಸರಿದು ನಿಂತಳು... ಮತ್ತೆ ಕಣ್ಣುಗಳು ಬಸ್ ಬಂತೆ? ಎಂದು ಅತ್ತ ನೋಡಿದವು... ಇಲ್ಲ, ಶಿವ್ಯಮನೆ ಬಸ್ ಇನ್ನೂ ಬಂದಿಲ್ಲ, ಆಗಲೇ ಕೈ ಗಡಿಯಾರದ ಮುಳ್ಳು ಹನ್ನೆರಡು ನಲವತ್ತರ ಗಡಿ ದಾಟುತ್ತಿದೆ, ಬಸ್ ಮಾತ್ರ ಬಂದಿಲ್ಲ. ಸಂತೆಯ ರಶ್ಶು, ತರಕಾರಿ ಚೀಲಗಳು, ಹಾಳು ಮಳೆ, ನೆನೆದು ಮುದ್ದೆಯಾದ ಕೊಡೆಗಳು, ಸೋರುವ ಬಸ್ಸಗಳು ಯಪ್ಪಾ... ಈ ಸಿದ್ದಾಪುರ ಬಸ್‌ಸ್ಟ್ಯಾಂಡಿನ ಉಸಾಬರಿ ಸಾಕೇ ಸಾಕು... ಇದೊಂದು ವರ್ಷ ಹಾಗೂ ಹೀಗೂ ಕಳೆದರೆ ಕಾಲೇಜ್ ಮುಗಿಯುತ್ತದೆ ಎಂದುಕೊಂಡು ನಿಟ್ಟುಸಿರಿಟ್ಟಳು. ಜೂನ್‌ನಲ್ಲಿ ಶುರುವಾದ ಮಳೆ, ಆಗಸ್ಟ್ ಹೊತ್ತಿಗೆ ಹಣೆ ಮೇಲೆ ನಿರಿಗೆಗಳನ್ನೆಬ್ಬಿಸಿತ್ತು, ಅಕೌಂಟು, ಎಕನಾಮಿಕ್ಸು ಎಂದು ಮಳೆ ಸದ್ದಿನ ಜೊತೆಗೇ ಕೇಳುವ ಪಾಠಗಳು ಸಾಕೆನಿಸಿತ್ತು. ಇನ್ನು ಬಂಕ್ ಮಾಡಿ ಐಸ್‌ಕ್ಯಾಂಡಿ ಹನುಮಂತನ ಹತ್ತಿರ ನಾಲ್ಕು ರೂಪಾಯಿಯ ಹಾಲ್ ಐಸನ್ನು ಎರಡು ರೂಪಾಯಿಗೆ ಹೇಗಾದರೂ ಚೌಕಾಸಿ ಮಾಡಿಕೊಳ್ಳೋಣ ಎಂದರೆ ಮಳೆಗಾಲದಲ್ಲಿ ಅವನೆಲ್ಲಿ ಬರುತ್ತಾನೆ, ಮೂರು ಕಂಬಳಿ ಹೊದ್ದು ಮಲಗಿರುತ್ತಾನೆಂಬ ಬೇಸರ. ಗಾರ್ಡನ್‌ನಲ್ಲಿ ಕೂತುಬಿಡೋಣ ಎಂದರೆ ಹಾಳು ಮಳೆಯ ಹಾವಳಿ... ಮತ್ತೆಲ್ಲಿಗೂ ಹೋಗಲಾಗದೇ ಕ್ಲಾಸಿನೊಳಗೇ ಬಂಧಿಯಾಗಬೇಕಿತ್ತು. ಈ ಬುಧವಾರ ಅದ್ಯಾವ ದೇವರು ಬುದ್ಧಿ ಕೊಟ್ಟು ಪ್ರಿನ್ಸಿ ಲೀವ್ ಹಾಕಿದ್ದಾರೋ? 'ಮಧ್ಯಾಹ್ನದ ಕ್ಲಾಸಿಗೆ ನಾನಿರೊಲ್ಲ. ಆ ಮೇಡಮ್ ಬಂದರೆ ಬೇಡಾ, ಸರ್ ಬಂದರೆ ರೋಲ್ ನಂಬರ್ ಏಟ್ ಎಂದು ಕೂಗಿದಾಗ ನೀನೇ ಎಸ್ ಸಾರ್ ಎಂದುಬಿಡೇ' ಎಂದು ಗೆಳತಿ ಕಂಪನಾಳಿಗೆ ತಾಕೀತು ಮಾಡಿ ಕೊಡೆ ಬಿಡಿಸಿಕೊಂಡು ಹೂಗಳಿಲ್ಲದ ಮೇ ಫ್ಲವರ್ ಮರಗಳ ಸಾಲು ಸಾಲನ್ನು ದಾಟಿಕೊಂಡು ಬಸ್‌ಸ್ಟ್ಯಾಂಡಿನ ಗುಂಟ ಕಾಲು ಸವೆಸಿದ್ದಳು. ಅಲ್ಲಿ ಮೇಡಮ್ಮೇ ಬಂದು ನಾನು ಅಬ್ಸೆಂಟ್ ಇರೋದಕ್ಕೆ ಬೈಕೊಂಡಿರ್ಬೇಕು; ಇಲ್ಲೀಗ ಬಸ್ಸಿಲ್ಲ ಎಂದು ಮತ್ತೊಮ್ಮೆ ಮುಖ ಕಿವುಚಿ ಅತ್ತ ನೋಡಿದಳು. 'ಸಾಯ್ಲಿ' ಎಂದು ಕಣ್ಣು ಕೀಳುವಷ್ಟರಲ್ಲಿ ಕೇಸರಿ ಮತ್ತು ಬಿಳಿ ಬಣ್ಣದ ಬಸ್ಸೊಂದು ಬಂದು ನಿಂತಿತು. ಕಡಕೇರಿ ಎಂದಿರುವ ಬಸ್ ಬೋರ್ಡನ್ನು ಕಿತ್ತು ಶಿವ್ಯಮನೆ ಹೆಗ್ಗರಣಿ ಎಂಬ ಕಪ್ಪು ಬೋರ್ಡ್ ಸಿಕ್ಕಿಸಿದ ಕಂಡಕ್ಟರ್. ಅಬ್ಬಾ ಎಂದುಕೊಳ್ಳುತ್ತ ಅತ್ತ ನಡೆದಳು.

ಇಷ್ಟು ಹೊತ್ತು ಅದೆಲ್ಲಿ ಗುಳೆ ಹೋಗಿದ್ದರೋ ಇವರೆಲ್ಲ! ಬಸ್ ಬರುತ್ತಲೇ ಎಷ್ಟೆಲ್ಲ ಜನ, ತರಕಾರಿ ಚೀಲಗಳು, ಅಬ್ಬಾ ನೂಕು ನುಗ್ಗಲು, ಅವಳಿಗೆ ಬಸ್ ಹತ್ತಲು ಕಷ್ಟವಾಯಿತು... ಅಂತು ಬಸ್ ಹತ್ತಿ ನಿಟ್ಟುಸಿರಿಡುವಷ್ಟರಲ್ಲಿ ಎಲ್ಲಾ ಸೀಟುಗಳ ಮೇಲು ಚೀಲಗಳು, ಕರ್ಚೀಫು, ಒದ್ದೆ ಕೊಡೆ ಹೀಗೆ... ಒಬ್ರು ಬರೋರಿದಾರೆ ಎಂದು ಹೇಳುವವರೆ... ಯಾವುದೂ ಖುಲ್ಲಾ ಇಲ್ಲ... ಕಿಟಕಿ ಪಕ್ಕದ ಸೀಟುಗಳಲ್ಲಿ ಒಂದೂ ಖಾಲಿ ಇಲ್ಲ... ಒಂದಾದರೂ ಖಾಲಿಯಿರಲಿ ಎಂದುಕೊಳ್ಳುತ್ತಾ ಮುನ್ನಡೆದಳು, ಡ್ರೈವರ್ ಎದುರಿಗಿನ ಉದ್ದನೆಯ ಸೀಟ್ ಬಿಟ್ಟರೆ ಮತ್ತೆಲ್ಲವೂ